ಕರ್ನಾಟಕ ವಿಧಾನಸಭೆ

ಸೋಮವಾರ ದಿನಾಂಕ 23ನೇ ಜುಲೈ 2007 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 33 ನಿಮಿಷಕ್ಕೆ ಸಮಾವೇಶಗೊಂಡಿತ್ತು

ಉಪಾಧ್ಯಕ್ಷರು ಶ್ರೀ ಎನ್ ವೈ ಗೋಪಾಲಕೃಷ್ಣರವರು ಪೀಠವನ್ನು ಅಲಂಕರಿಸಿದರು

1 ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

151 (1038) ಡಾ॥ ಅನ್ನದಾನಿ ಕೆ (ಮಳವಳ್ಳಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಗ್ರಾಮಸಹಾಯಕರು ದಿನಗೂಲಿ ಆಧಾರದ ಮೇಲೆ ಸುಮಾರು 15–20 ವರ್ಷಗಳಿಂದ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ ಇವರನ್ನು ಖಾಯಂ ಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು,

ಇ) ಗ್ರಾಮಸಹಾಯಕ್ಕಾಗಿ ಕೆಲಸ ಮಾಡುತ್ತಿರುವವರು ಹೆಚ್ಚು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಕ್ಕೆ ಸೇರಿದವರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ ಈ ಶೋಷಿತರಿಗೆ ಖಾಯಂ ಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ (ಕಂದಾಯ ಸಚಿವರು)

ಅ) ಇಲ್ಲ ಗ್ರಾಮಸಹಾಯಕರು ಮಿತವೇತನದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ

ಆ) ಉದ್ಭವಿಸುವುದಿಲ್ಲ

ಇ) ಹೌದು

ಈ) ಉದ್ಭವಿಸುವುದಿಲ್ಲ

ಡಾ ಕೆ ಅನ್ನದಾನಿ ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರಗಳನ್ನು ಒದಗಿಸಿದ್ದಾರೆ ಸುಮಾರು 20–25 ವರ್ಷಗಳಿಂದ ಈ ಹಿಂದೆ ಏನು ನಮ್ಮಲ್ಲಿ ಶ್ಯಾನುಬೋಗರು ಮತ್ತು ಪಟೇಲರು ಎಂಬ ಪದ್ಧತಿ ಇತ್ತು ಆ ಪದ್ಧತಿಯಲ್ಲಿ ತೋಟಿ ಆಗಿ ಕೆಲಸ ಮಾಡುತ್ತಿದ್ದಂತಹ ಜನರಿದ್ದಾರೆ ಇದು ಆದ ಮೇಲೆ Village Accountant ಎಂದು ಬಂದ ಮೇಲೆ ಅವರಿಗೆ ಒಬ್ಬರು ಸಹಾಯಕರಾಗಿ ನೇಮಕ ಮಾಡಿದಂತಹ ಸಂದರ್ಭದಲ್ಲಿ ಅದನ್ನು ಬದಲಾವಣೆ

ಮಾಡಲಾಯಿತು ಅವತ್ತಿನಿಂದ ಇವತ್ತಿನವರೆಗೂ ಕೂಡ ಸುಮಾರು ಗೌರವಧನದ ಲೆಕ್ಕಚಾರದಲ್ಲಿ ಇವರುಗಳು ಕೆಲಸವನ್ನು ಮಾಡಿಕೊಂಡು ಬರುತ್ತಿದ್ದಾರೆ ಕಳೆದ ಸಮ್ಮಿಶ್ರ ಸರ್ಕಾರದಲ್ಲಿ ಮಾನ್ಯ ಎಂ ಪಿ ಪ್ರಕಾಶ್‌ರವರು ಕಂದಾಯ ಸಚಿವರಾಗಿದ್ದಾಗ ಅವರನ್ನು ಖಾಯಂ ಮಾಡಿದ್ದಾರೆ ಅದಕ್ಕಾಗಿ ಬಹಳ ಸಂತೋಷ, ಅವರಿಗೆ ಅಭಿನಂದನೆಗಳು ಕೇವಲ ಎರಡು ಸಾವಿರ ರೂಪಾಯಿಗಳಿಗೆ ಅವರುಗಳು ಇವತ್ತು ಕೆಲಸ ಮಾಡಬೇಕೆಂಬ ಒಂದು ನಿಯಮವನ್ನು ನಮ್ಮ ಸರ್ಕಾರ ಹಾಕಿದೆ ಆದರೆ ಎರಡು ಸಾವಿರ ರೂಪಾಯಿಗಳಲ್ಲಿ ಅವರುಗಳು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಅದು ಸಾಧ್ಯವಾಗುವುದಿಲ್ಲ ಅದಕ್ಕಾಗಿ ಸರ್ಕಾರ ಅವರನ್ನು ಡಿ–ಗ್ರೂಪ್ ನೌಕರರನ್ನಾಗಿ ಗಣನೆಗೆ ತೆಗೆದುಕೊಂಡರೆ ಒಳ್ಳೆಯದು ಎಂದು ನನ್ನ ಭಾವನೆಯಾಗಿದೆ ಅದನ್ನು ಮಾಡಬೇಕೆಂದು ಸರ್ಕಾರವನ್ನು ಈ ಮೂಲಕ ಒತ್ತಾಯ ಮಾಡುತ್ತಿದ್ದೇನೆ

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಉಪಾಧ್ಯಕ್ಷರೆ, ಈ ಒಂದು ದಿನಗೂಲಿ ಆಧಾರದ ಮೇಲೆ ಗ್ರಾಮಸಹಾಯಕರು ಕರ್ತವ್ಯ ನಿರ್ವಹಿಸುತ್ತಿಲ್ಲ ಹಿಂದೆ 1963 ರಲ್ಲಿ ಈ Village Offices Abolition Act ಏನು ಬಂತು, ಆ ಸಂದರ್ಭದಲ್ಲಿ ಆ ಹುದ್ದೆಗಳು ರದ್ದಾಗಿದ್ದರಿಂದ ಕೆಳಹಂತದ ಹುದ್ದೆಗಳಲ್ಲಿ ಖಾಲಿಯಿರುವಂತಹ ನೌಕರರನ್ನು ತಾತ್ಕಾಲಿಕ ಆಧಾರದ ಮೇಲೆ ಯಾವುದೇ ವಂಶಪಾರಂಪರ್ಯದ ಹಕ್ಕುಗಳನ್ನು ಅನ್ವಯವಾಗದಂತೆ ಕಾಲಕಾಲಕ್ಕೆ ಅನುಗುಣವಾಗಿ ಆಡಳಿತಾತ್ಮಕವಾದ ಅನುಕೂಲಕ್ಕಾಗಿ 31 12 1978 ರಿಂದ Village Accountant ರವರುಗಳಿಗೆ ಸಹಾಯ ಮಾಡಲು ಗ್ರಾಮ ಸಹಾಯಕರನ್ನು ನೇಮಕ ಮಾಡಿದ್ದೇವೆ ಆಗ ಕೇವಲ 100 ರೂಪಾಯಿಗಳ ಮೇಲೆ ಅವರಿಗೆ ಮಾಸಿಕ ಮಿತವೇತನದ ಆಧಾರದ ಮೇಲೆ ಅಪಾಯಿಂಟ್‌ಮೆಂಟಾಯಿತು ಆ ಸಂದರ್ಭದಲ್ಲಿ 6169 ಜನ ಗ್ರಾಮ ಸಹಾಯಕರನ್ನು ಕರ್ತವ್ಯ ನಿರ್ವಹಿಸುತ್ತಿದ್ದರು ಅದರಲ್ಲಿ ಎಸ್‌ಸಿ ಎಸ್‌ಟಿ ಜನಾಂಗದವರು ಮುಂದೆ ಇಲ್ಲಿಯವರೆವಿಗೂ ಒಟ್ಟು 10457 ಜನ ಗ್ರಾಮ ಸಹಾಯಕರು ಇದ್ದು ಅವರುಗಳು ಕೆಲಸ ಮಾಡುತ್ತಿದ್ದಾರೆ ಈ ಒಂದು Village Accountantsಗಳು ಏನು ಇದ್ದಾರೆ, ಅವರುಗಳೀಗೆ ಇವರು ಸಹಾಯಕರಾಗಿ ಕೆಲಸವನ್ನು ಮಾಡುತ್ತಿದ್ದಾರೆ ಬಹಳ ಒಂದು ಉತ್ತಮವಾದ ರೀತಿಯಲ್ಲಿ ಗ್ರಾಮೀಣ ಭಾಗದಲ್ಲಿ ಇವತ್ತು ಸರ್ಕಾರದ ಪರವಾಗಿ ಕೆಳಹಂತದಲ್ಲಿ ಏನು ಕೆಲಸಕಾರ್ಯಗಳು ಇವೆ ಅವೆಲ್ಲವನ್ನು ಇವರುಗಳು ಮಾಡುತ್ತಿದ್ದಾರೆ ಇವತ್ತಿನವರೆಗೂ ಅವರಿಗೆ ಪ್ರತಿ ತಿಂಗಳೂ 2000–00 ರೂಪಾಯಿಗಳಂತೆ ಮಿತ ವೇತನವನ್ನು ಸರ್ಕಾರದವರು ಕೊಡುತ್ತಿದ್ದಾರೆ ಇಲ್ಲಿಯವರೆಗೆ ಏನಿತ್ತು ಎಂದರೆ ಪ್ರತಿ ವರ್ಷ ಅವರಿಗೆ ಅವರ ಸೇವೆಯನ್ನು ರಿನ್ಯೂವಲ್ ಮಾಡುತ್ತಿದ್ದೇವೆ ಒಂದು ವರ್ಷ ಆದಮೇಲೆ ಕ್ಯಾಬಿನೆಟ್‌ಗೆ ಆ

Subject ಬರುತ್ತದೆ ಮತ್ತೆ ಅವರು ರಿನ್ಯೂವಲ್ ಮಾಡುವುದು ಇವೆಲ್ಲವೂ ಆಗುತ್ತಿತ್ತು ಮೊನ್ನೆ ಕಳೆದ ಬಾರಿ ಕ್ಯಾಬಿನೆಟ್‌ನಲ್ಲಿ ಈ ವಿಷಯವನ್ನು ನಾವು ತೆಗೆದುಕೊಂಡು ಬಂದು ಅವರು ಪ್ರತಿ ವರ್ಷ ನೇಮಕಾತಿಯನ್ನು ಪುನಃ ರಿನ್ಯೂವಲ್ ಮಾಡುತ್ತಿದ್ದೆವೆ ಅದರ ಬದಲು ಅವರನ್ನು ಖಾಯಂ ಆಗಿ ಏನು ನೇಮಕವಾಗುವ ರೀತಿಯಲ್ಲಿ ಈಗಾಗಲೇ ಸರ್ಕಾರ ನಿರ್ಣಯವನ್ನು ತೆಗೆದುಕೊಂಡಿದೆ ಕಳೆದ ಕ್ಯಾಬಿನೆಟ್‌ನಲ್ಲಿ ಈ ವಿಷಯದ ಬಗ್ಗೆ approval ತೆಗೆದುಕೊಂಡಿದ್ದೇವೆ ಮಾನ್ಯ ಅನ್ನದಾನಿಯವರು ಹೇಳುತ್ತಿದ್ದಾರೆ ಅವರನ್ನು ಡಿ–ಗ್ರೂಫ್ ನೌಕರರುಗಳ ರೀತಿಯಲ್ಲಿ ಅವರಿಗೆ ಸೌಲಭ್ಯ ಹಾಗೂ ಖಾಯಂ ಮಾಡಬೇಕೆಂದು ಏನು ಹೇಳುತ್ತಿದ್ದಾರೆ ಅದರ ಬಗ್ಗೆ ಬೇಡಿಕೆ ಇದೆ, ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಉಪಾಧ್ಯಕ್ಷರೆ, ಈ ಬಗ್ಗೆ ಬಹಳ ಸಲ ಅಸೆಂಬ್ಲಿಯಲ್ಲಿ ಕೇಳುತ್ತಿದ್ದೇವೆ ಇದೇ ಉತ್ತರ ಮಾತ್ರ ಬರುತ್ತದೆ ನೀವುಗಳು ಒಪ್ಪಿಕೊಂಡಿದ್ದೀರಿ ಗ್ರಾಮ ಸಹಾಯಕರಾಗಿ ಕೆಲಸ ಮಾಡುತ್ತಿರುವವರು ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರೆಂಬುದು ಸರ್ಕಾರದ ಗಮನಕ್ಕೆ ಬಂದಿದೆ ಎಂದರೆ ಹೌದು ಎಂದು ಉತ್ತರವನ್ನು ಕೊಟ್ಟಿದ್ದೀರಿ ಈಗ ನಕ್ಸಲೇಟ್ ಎಂದು ಆಗುತ್ತಾರಲ್ಲಾ, ಹಿಂದೆ ನಾವು ಗೌಡಕಿ ಮಾಡುವಾಗ ಆ ಕಾಲದಲ್ಲಿ ಇವರು ಗ್ರಾಮಸಹಾಯಕರಾಗಿ ಇದ್ದವರು ಆ ಕಾಲದಲ್ಲಿ ಇವರು ಊರಿನಲ್ಲಿ ಅದ್ಸಾದಿ ಊರಿನಲ್ಲಿ ಏನಾದರೂ ಆದರೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು ಊರಿನಲ್ಲಿ ಏನಾದರೂ ದುಃಖವಾದರೆ, ತೊಂದರೆಯಾದರೆ ಯಾರಾದರೂ ದಂಗೆ ಏಳುವವರು ಇದ್ದರೆ, ಯಾರಾದರೂ ದುಷ್ಟರು ಇದ್ದರೆ ಅವರನ್ನು ನಿಗ್ರಹ ಮಾಡುತ್ತಿದ್ದರು ದುರ್ದೈವದಿಂದ ಗೌಡರನ್ನ ತೆಗೆದರು, ಹೋಗಲಿ, ಆದರೆ ಗ್ರಾಮ ಸಹಾಯಕರ ಪೋಸ್ಟ್ ಬಹಳ ಹುದ್ದೆಯಾಗಿದೆ ಬಹುಶಃ ನಿಮ್ಮ ತಲಾಟಿಯವರು ಇರಬೇಕಾದಲ್ಲಿ ನೀವು ಈ ಗ್ರಾಮ ಸಹಾಯಕರನ್ನು ಇಟ್ಟಿದ್ದೀರಿ ಆ ಪೋಸ್ಟ್ ಬಹಳ ಅವಶ್ಯಕವಾಗಿದೆ ದಯವಿಟ್ಟು ಅವರು ಖಾಯಂ ಮಾಡುವುದಕ್ಕೆ ನಿಮಗೆ ಏನು ತೊಂದರೆ ಇದೆ? ಸುಮ್ಮನೆ ಇವರು ಇದೇ ಉತ್ತರವನ್ನು ಕೊಡುತ್ತಿದ್ದಾರೆ ರಾಜ್ಯದಲ್ಲಿ ಎಷ್ಟು ಜನ ಗ್ರಾಮ ಸಹಾಯಕರು ಇದ್ದಾರೆಂದು ಹೇಳಬೇಕು ಈಗ ಅವರಿಗೆ ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ ಅವರನ್ನು ಖಾಯಂ ಮಾಡಿದರೆ ಸರ್ಕಾರಕ್ಕೆ ಎಷ್ಟು ಹೊರೆ ಬರುತ್ತದೆ ಎಂದು ದಯವಿಟ್ಟು ಹೇಳಬೇಕು

ಡಾ॥ ಕೆ ಅನ್ನದಾನಿ ಇಲ್ಲಿ ಕೆಲಸ ಮಾಡುತ್ತಿದ್ದಂತಹವರು ಹೆಚ್ಚಿನ ಜನರು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಸೇರಿದಂತಹ ಜನರಾಗಿದ್ದಾರೆ ಅವರುಗಳು ಇಷ್ಟು ವರ್ಷದಿಂದಲೂ ಕೂಡ ಇವರ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿಲ್ಲ

ಎಂದು ನನಗನಿಸುತ್ತದೆ ಏಕೆಂದರೆ ಈ ವರ್ಗ ಶೋಷಿತ ವರ್ಗ ಅದರಲ್ಲಿ ಎಲ್ಲಾ ರೀತಿಯಲ್ಲೂ ಕೂಡ ಅಸ್ಪೃಶ್ಯರು ಈ ಜನರು ಈ ವರ್ಗದಲ್ಲಿ ಕೆಲಸ ಮಾಡುತ್ತಿದ್ದಾರೆ ಇವರು ತೋಟಿ,ತಳವಾರ ಜನಾಂಗದಿಂದ ಬಂದಿರಕ್ಕಂತಹ ಜನ ಅನಂತರ village accountant, ಗ್ರಾಮಸೇವಕರಾಗಿ ಕೆಲಸ ಮಾಡುವಂತಹ ಈ ಜನರನ್ನು ಪರಮನೆಂಟ್ ಮಾಡುವುದಕ್ಕೆ ಸುಮಾರು 15–20 ವರ್ಷದಿಂದ ತಳ್ಳಿಕೊಂಡು ಬಂದಿದ್ದೀರೆಂದರೆ, ಈ ವರ್ಗದ ಜನರ ಬಗ್ಗೆ ನಿಮಗೆ ಇರುವ ಕಾಳಜಿ ಏನು ಎಂದು ನಾವು ಪ್ರಶ್ನೆಯನ್ನು ಮಾಡಬೇಕಾಗುತ್ತದೆ ನಿಮಗೆ ಅವರ ಬಗ್ಗೆ ಏನಾದರೂ ಕಾಳಜಿ ಇದ್ದರೆ ದಯಮಾಡಿ ಈ ಕೂಡಲೇ ಅವರನ್ನು ಡಿ–ಗ್ರೂಫ್ ನೌಕರರೆಂದು ಪರಿಗಣಿಸಿ ಈ ಕೂಡಲೇ ಅವರನ್ನು permanent ಮಾಡಬೇಕೆಂದು ಕೇಳುತ್ತೇನೆ ಎಲ್ಲಾ ಸಂದರ್ಭಗಳಲ್ಲಿಯೂ ಕ್ಯಾಬಿನೆಟ್‌ನಲ್ಲಿ ಟ್ಟಿದ್ದೇವೆ ಅಸೆಂಬ್ಲಿಯಲ್ಲಿ ನಾವು ಮಾತನಾಡುತ್ತಿದ್ದೇವೆ ಬರೀ ದಲಿತರು ಎಂಬ ಒಂದೇ ಉದ್ದೇಶಕ್ಕೋಸ್ಕರ ಮಾಡುತ್ತಿಲ್ಲವೇ ಏನು ಎಂದು ನನಗೆ ಅರ್ಥವಾಗುತ್ತಿಲ್ಲ ಏಕೆಂದರೆ ಈ ವರ್ಗಕ್ಕೆ ನ್ಯಾಯ ಸಿಗಬೇಕು, ಅದಕ್ಕೆ ತಾವು ಧ್ವನಿಗೂಡಿಸಬೇಕೆಂದರೆ,, ಧ್ವನಿ ಇಲ್ಲದವರ ಜನಕ್ಕೆ ಧ್ವನಿಕೊಡಬೇಕೆಂದರೆ ದಯಮಾಡಿ ಅವರನ್ನು ಯಾವಾಗ permanent ಮಾಡಿತ್ತೀರಿ, ಎಷ್ಟು ದಿನದಲ್ಲಿ ಮಾಡುತ್ತೀರಿ, ಅವರುಗಳನ್ನು ಮತ್ತೇ ಮಾಡುವುದಕ್ಕೆ ಸಾಧ್ಯವೇ, ಡಿ–ಗ್ರೂಫ್ ನೌಕರರಾಗಿ ಅವರನ್ನು ಪರಿಗಣಿಸುತ್ತೀರಾ ಅದವಾ ಇಲ್ಲವೇ ಆ ಬಗ್ಗೆ ತಾವು ಸದನದಲ್ಲಿ ದಯಮಾಡಿ ತಿಳಿಸಬೇಕು

ಶ್ರೀ ಕೆ.ಎನ್ ರಾಜಣ್ಣ ಮಾನ್ಯ ಉಪಾಧ್ಯಕ್ಷರೆ, ತಾವು ಉತ್ತರಗಳನ್ನು ಒಂದು ಸಾರಿ ನೋಡಿದರೆ ಚೆನ್ನಾಗಿರುತ್ತದೆ ಗ್ರಾಮಸಹಾಯಕರು ಸುಮಾರು 15–20 ವರ್ಷಗಳಿಂದ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಾ ಎಂದರೆ, ಇಲ್ಲ ಎಂದು ಉತ್ತರ ಬರುತ್ತದೆ ಈ ಉತ್ತರವನ್ನು ಯಾವ ಅಧಿಕಾರಿಗಳು ನಿಮಗೆ ಬರೆದುಕೊಡುತ್ತಾರೆ ಎಂದು ಹೇಳಿದರೆ ಸ್ವಲ್ಪ ನಿಮಗೆ ಗೊತ್ತಾಗುತ್ತದೆ 1974–75 ನೇ ಇಸವಿಯಲ್ಲಿ ಸುಮಾರು 15–20 ವರ್ಷಗಳಿಂದ ಇವರುಗಳು ಮಾಹೆಯಾನ ನೂರು ರೂಪಾಯಿಗಳಂತೆ ಶುರುಮಾಡಿ ಕೆಲಸ ಮಾಡಿದಂತಹ ಜನರು ಆಗಿದ್ದಾರೆ ಇದು ದೇಶಕ್ಕೆ ಗೊತ್ತಿದೆ, ಜಗದೀಶ್ ಶೆಟ್ಟರ್ ಅವರು ಒಂದು ಸಾರಿ ಉತ್ತರವನ್ನು ಓದಿ ನೀವೇ ಇಲ್ಲವೆಂದು ಬರೆಯುತ್ತೀರಿ ಇಂಥ ಉತ್ತರವನ್ನು ಸದನದಲ್ಲಿ ಓದಲಿಕ್ಕೆ ನಾಚಿಕೆಯಾಗುವುದಿಲ್ಲವೇ ?

ಶ್ರೀ ಜಗದೀಶ್ ಶೆಟ್ಟರ್ ತಾವು ಸ್ವಲ್ಪ ವಿಚಾರ ಮಾಡಿ, ನೋಡಿ ದಿನಗೂಲಿ ಆಧಾರದ ಮೇಲೆ ಅವರು ಮಾಡುತ್ತಿಲ್ಲ ಅದಕ್ಕೆ ನಾವು ಉತ್ತರ ಇಲ್ಲವೆಂದು ಹೇಳಿದ್ದೇವೆ ನೀವು ಸುಮ್ಮನೆ ಮಾತನಾಡಬೇಡಿ ನೀವು ಸಹ ಉತ್ತರವನ್ನು ಒಮ್ಮೆ ಓದಿ ಸುಮ್ಮನೆ ನಾಚಿಕೆಯಾಗುವುದಿಲ್ಲ ಎಂಬ ಶಬ್ಧ

ಪ್ರಯೋಗ ಮಾಡಿದರೆ ಮುಗಿಯುತ್ತೇನು? ದಿನಗೂಲಿ ಆಧಾರದ ಮೇಲೆ ಮಾಡುತ್ತಿದ್ದೀರಾ ಎಂದು ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಇಲ್ಲವೆಂದು ಹೇಳಿದ್ದೇವೆ

ಶ್ರೀ ಕೆ ಎನ್ ರಾಜಣ್ಣ ಡಾ ಅನ್ನದಾನಿಯವರು ಹೇಳಿದ ಹಾಗೆ 15–20 ವರ್ಷಗಳಿಂದ ಅಂದರೆ 1974–75 ಇಸವಿಯಿಂದ ಕೆಲಸ ಮಾಡುತ್ತಿದ್ದಾರೆ

ಶ್ರೀ ಕೆ ಅನ್ನದಾನಿ ಮಾನ್ಯ ಅಧ್ಯಕ್ಷರೆ, ದಿನಗೂಲಿ ಎಂಬ ಪದವನ್ನು ನಾನು ನನ್ನ ಪ್ರಶ್ನೆಯಲ್ಲಿ ಬಳಸಿಯೇ ಇಲ್ಲ ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಬೇಕು

ಶ್ರೀ ಜಗದೀಶ್ ಶೆಟ್ಟರ್ ನಿಮ್ಮ ಪ್ರಶ್ನೆಯಲ್ಲಿ ದಿನಗೂಲಿ ಎಂಬ ಶಬ್ದ ಇದೆ

ಶ್ರೀ ಕೆ ಎನ್ ರಾಜಣ್ಣ 15–20,25,30 ವರ್ಷಗಳಿಂದ ಇವರು ಸುಮಾರು ನೂರು ರೂಪಾಯಿಗಳ ಮಿತ ವೇತನದ ಮೇಲೆ ಕೆಲಸ ಮಾಡುತ್ತಿದ್ದಾರೆ ಪ್ರಾರಂಭವಾದಾಗ ಸುಮಾರು 5,500 ರಿಂದ 6,000 ಜನರಿದ್ದವರು ಈಗ 10,000 ಜನರು ಕೆಲಸಗಳಿಗೆ ಸೇರಿದ್ದಾರೆ ಅದರಲ್ಲಿ ಬಹಳಷ್ಟು ಜನ ಸತ್ತು ಹೋಗಿದ್ದಾರೆ, ನಿವೃತ್ತರಾಗಿದ್ದಾರೆ ಬಹುಶಃ ಸತ್ತವರ ಎಷ್ಟೋ ಜನ ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ ಇದೇನೇ ಇರಬಹುದು, ಈ ಜನರು ಪ್ರತಿಯೊಂದು ಪರಿಶಿಷ್ಟ ಪಂಗಡ ಹಾಗೂ ಜಾತಿಗೆ ಸೇರಿದವರಾಗಿದ್ದು 100ಕ್ಕೆ 90 ಭಾಗದಷ್ಟು ಆ ಜನರೇ ಕೆಲಸ ಮಾಡುತ್ತಿರುವವರು, ಇಂಥವರನ್ನು ಡಿ–ಗ್ರೂಪ್ ನೌಕರರನ್ನಾಗಿ ಖಾಯಂ ಮಾಡಬೇಕೆಂಬ ಒತ್ತಾಯ ಸನ್ಮಾನ್ಯ ಅನ್ನದಾನಿಯವರ ಉದ್ದೇಶವೆಂದು ನಾವೆಲ್ಲಾ ತಿಳಿದುಕೊಂಡಿದ್ದೇವೆ ಈ ಹಿನ್ನೆಲೆಯಲ್ಲಿ ಈಗಾಗಲೇ ಸಚಿವರು ಉತ್ತರ ಕೊಡತಕ್ಕ ಸಂದರ್ಭದಲ್ಲಿ ನಾವು ಪರಿಶೀಲನೆ ಮಾಡುತ್ತೇವೆನ್ನುವ ಸಮಾಧಾನದ ಮಾತನ್ನು ಹೇಳಿದ್ದಾರೆ ಈ ಪರಿಶೀಲನೆ ಮಾಡುತ್ತೇವೆ ಎನ್ನುವ ಉತ್ತರಕ್ಕೂ ಅವರು ಹೇಳುವ ಮಾತುಗಳಿಗೂ ಬಹಳ ವ್ಯತ್ಯಾಸ ಬರುತ್ತದೆ ಅದಕ್ಕೆ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಆದಷ್ಟು ಜಾಗ್ರತೆ ಡಿ–ಗ್ರೂಪ್ ನೌಕರರನ್ನು ಸರ್ಕಾರ ಖಾಯಂಗೊಳಿಸಬೇಕೆಂದು ನಮ್ಮ ಬೇಡಿಕೆ, ಇದಕ್ಕೆ ಸಚಿವರು ಸ್ಪಂದಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ

ಶ್ರೀ ಎನ್ ಯೋಗೀಶ್ ಭಟ್ ಇಲ್ಲಿ ಸನ್ಮಾನ್ಯ ಸಚಿವರು ಇದನ್ನು ಪರಿಶೀಲಿಸುತ್ತೇವೆಂದು ಹೇಳುವುದನ್ನು ನಾನು ಸ್ವಾಗತ ಮಾಡುತ್ತೇನೆ ಆದರೆ ಸರ್ಕಾರದ ಎಲ್ಲಾ ಕಡೆಗಳಲ್ಲಿ minimum wages ಅನ್ನು insist ಮಾಡುತ್ತಿದ್ದಾರೆ ರೂ 2,600ಕ್ಕಿಂತ ಹೆಚ್ಚು ಬರಬೇಕಾಗುತ್ತದೆ, ಆದರೆ ಇಲ್ಲಿಯತನಕ minimum wages ಆ ಪಟ್ಟದಲ್ಲಾದರೂ ಬರುವಂಥದ್ದಕ್ಕೆ ಕ್ರಮ ತೆಗೆದುಕೊಳ್ಳಬಹುದೇ?

ಉಪಾಧ್ಯಕ್ಷರ ಪಾಟೀಲರೆ ಕುಳಿತುಕೊಳ್ಳಿ, ಸಚಿವರು ಉತ್ತರ ಹೇಳಿ

ಶ್ರೀ ಎಸ್ ಎಸ್ ಪಾಟೀಲ್ ನಿಮ್ಮ ಉತ್ತರವನ್ನು ಒಪ್ಪುವುದಿಲ್ಲ ಏಕೆಂದರೆ ಯಾವಾಗಲೂ ಹೀಗೆ ಆಗುತ್ತದೆ ಮತ್ತೆ ನೂರು ರೂಪಾಯಿಗಳು ಹೆಚ್ಚು ಮಾಡುತ್ತೇವೆಂದು ಹೇಳುತ್ತಾರೆ ನೀವು ಯಾವುದೇ ಪರಿಸ್ಥಿತಿಯಲ್ಲಿ ಅವರನ್ನು ದಯವಿಟ್ಟು ಖಾಯಂ ಮಾಡಬೇಕಾಗಿದೆ, ಅದಕ್ಕೆ ಎಷ್ಟು ಖರ್ಚು ಬರುತ್ತದೆಂದು ಹೇಳಿ

ಶ್ರೀ ಜಗದೀಶ್ ಶೆಟ್ಟರ್ ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಕಂದಾಯ ಇಲಾಖೆಯಲ್ಲಿ ಈ ಒಂದು ಗ್ರಾಮಸಹಾಯಕರು 10,450 ಜನ ಕೆಲಸ ಮಾಡುತ್ತಿದ್ದಾರೆ 2005 ರಲ್ಲಿ 1,000/–ರೂ ಮಿತ ವೇತನ ಇತ್ತು ಅದನ್ನು 2,000/– ರೂಗಳಿಗೆ ಏರಿಸಿದ್ದೇವೆ ಈಗ ಅವರು 2,000–00 ರೂಗಳನ್ನು ಪಡೆದುಕೊಳ್ಳುತ್ತಿದ್ದಾರೆ ಆಡಳಿತ ಸುಧಾರಣಾ ಆಯೋಗವನ್ನು ಹಿಂದಿನ ಸರ್ಕಾರದಲ್ಲಿ ರಚಿಸಲಾಗಿದೆ ಆ ಆಯೋಗ ಈ 10 450 ಜನ ಗ್ರಾಮ ಸಹಾಯಕರ ಹುದ್ದೆಗಳನ್ನು ರದ್ದು ಮಾಡಬೇಕೆಂದು ಶಿಫಾರಸ್ಸು ಮಾಡಿದ್ದರು ಆದರೆ ಆ ಹುದ್ದೆಗಳನ್ನು ರದ್ದು ಮಾಡಬಾರದೆಂಬುದಾಗಿ ಈ ಸರ್ಕಾರದ ಅಭಿಪ್ರಾಯ ತೆಗೆದುಕೊಂಡು ಕ್ಯಾಬಿನೆಟ್‌ನಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದೆ ಕ್ಯಾಬಿನೆಟ್ ನಲ್ಲಿ ಇದನ್ನು ರದ್ದು ಮಾಡಬಾರದು, ಆಡಳಿತ ಸುಧಾರಣಾ ಆಯೋಗದವರು ಮಾಡಿರುವ ಶೀಫಾರಸ್ಸು ಸರಿಯಲ್ಲ, ಹಾಗಾಗಿ ಆ ಹುದ್ದೆಗಳನ್ನು ರದ್ದು ಮಾಡಬಾರದಾಗಿ ನಾವು ನಿರ್ಣಯವನ್ನು ಕೈಗೊಂಡಿದ್ದೇವೆ ಮತ್ತು ಪ್ರತಿ ವರ್ಷ ಮುಂದುವರೆಸುವುದೆಂದು ಆರಂಭವಾಗಿತ್ತು ಈ ಸಲ ಕ್ಯಾಬಿನೆಟ್‌ನಲ್ಲಿ ಪ್ರತಿ ವರ್ಷ ಇದನ್ನು ಕ್ಯಾಬಿನೆಟ್‌ಗೆ ತರುವುದು ಬೇಡ, ಅದು ಖಾಯಂ ಆಗಿ ಅವರನ್ನು ಮುಂದುವರೆಸಬೇಕೆಂಬ ಮಹತ್ವದ ನಿರ್ಣಯವನ್ನು ತೆಗೆದುಕೊಂಡಿದ್ದೇವೆ ಇವತ್ತು ಮಾನ್ಯ ರಾಜಣ್ಣ, ಪಾಟೀಲರು, ಅನ್ನದಾನಿ, ಯೋಗೀಶ್‌ಭಟರವರು ಇವರನ್ನು ಖಾಯಂ ಮಾಡಬೇಕೆಂದು ಪ್ರಸ್ತಾಪ ಮಾಡಿರುವಂತೆ ಇದಕ್ಕೆ ಬಹಳ ವರ್ಷಗಳಿಂದ ಬೇಡಿಕೆ ಇದೆ ಹಾಗಾಗಿ ಇದರ ಬಗ್ಗೆಯೂ ಸರ್ಕಾರ ಬಹಳ ಗಂಭೀರವಾಗಿ ಪರಿಶೀಲನೆ ಮಾಡುತ್ತದೆ ಮಾನ್ಯ ಪಾಟೀಲರು ಇದಕ್ಕೆ ಖರ್ಚು ಎಷ್ಟು ಬರುತ್ತದೆಂದು ಕೇಳಿದರು, ಈಗ ನಾವು ಕೊಡುತ್ತಿರುವ 2,000–00 ರೂ, ವೇತನಕ್ಕೆ ವರ್ಷಕ್ಕೆ ನಮಗೆ 23 00 ಕೋಟಿ ರೂಗಳ ವೆಚ್ಚ ಬರುತ್ತದೆ ಅವರನ್ನು ಖಾಯಂ ಮಾಡುವುದರಿಂದ 58 00 ಕೋಟಿ ರೂಗಳು ಪ್ರತಿ ವರ್ಷ ವೆಚ್ಚ ಬರುತ್ತದೆ ಹಾಗಾಗಿ ಇದನ್ನು ನಮ್ಮ ಆರ್ಥಿಕ ಇಲಾಖೆಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ ಇವರನ್ನು ಖಾಯಂ ಮಾಡುವುದರ ಬಗ್ಗೆ ನಾವು ಗಂಭೀರವಾಗಿ ಪರಿಶೀಲಿಸುತ್ತೇವೆ

ಉಪಾಧ್ಯಕ್ಷರು ಈಗ ರಘುಪತಿ ಭಟ್, ಪಾಟೀಲರೆ ಸಪ್ಲಿಮೆಂಟರಿ ಸಾಕು,

ಶ್ರೀ ಎಸ್ ಎಸ್ ಪಾಟೀಲ್ ಪ್ರಕಾಶರವರು ಹೇಳಿದ ಹಾಗೆ ಇದು ಬಹಳ ಮಹತ್ವದ್ದು, ಸುಮ್ಮನೆ ಅಲ್ಲಿ ಬಡವರನ್ನು ದುಡಿಸಿಕೊಳ್ಳುತ್ತೀರಿ? ಪರಿಶೀಲನೆ ಮಾಡುತ್ತೇವೆಂದರೆ ಹೇಗೆ? ದಯವಿಟ್ಟು ಅವರನ್ನು ಖಾಯಂ ಮಾಡುತ್ತೇವೆಂದು ಹೇಳಿ

ಡಾ॥ ಕೆ ಅನ್ನದಾನಿ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಿದ್ದಾರೆ, ನಮಗೆ ಸ್ಪಷ್ಟವಾದಂಥ ಹೇಳಿಕೆಯನ್ನು ಮಾನ್ಯ ಸಚಿವರು ಹೇಳಬೇಕು

ಶ್ರೀ ಎಸ್,ಎಸ್,ಪಾಟೀಲ್ ಇಡೀ ಸದನ ಸೇರಿ ನಿಮಗೆ ರರಾವು ಮಾಡಿ ಕೊಡುತ್ತೇವೆ ನಾವು ಸಪೋರ್ಟ್ ಮಾಡುತ್ತೇವೆ ಕಮಿಟಿಯಲ್ಲಿ ಇಡಿ ಆಗ ಯಾರೂ ಇದಕ್ಕೆ ವಿರೋಧ ಮಾಡುವುದಿಲ್ಲ

ಡಾ॥ ಕೆ ಅನ್ನದಾನಿ ನಾವು ಸ್ಪಷ್ಟವಾದಂಥ ಉತ್ತರವನ್ನು ಕೇಳುತ್ತಿದ್ದೇವೆ

ಉಪಾಧ್ಯಕ್ಷರು ಅನ್ನದಾನಿಯವರೇ, ಒಂದೊಂದು ಪ್ರಶ್ನೆಗೆ 15–15 ನಿಮಿಷ ತೆಗೆದುಕೊಂಡರೆ ಮುಂದಕ್ಕೆ ಹೋಗುವುದಕ್ಕಾಗುವುದಿಲ್ಲ

ಶ್ರೀ ಜಗದೀಶ್ ಶೆಟ್ಟರ್ ನಾವು ಈ ಪ್ರಸ್ತಾವನೆಯನ್ನು ಹಣಕಾಸು ಇಲಾಖೆಗೆ ಕಳುಹಿಸುತ್ತೇನೆ ಹಾಗೆಯೇ ಇದನ್ನು ಕ್ಯಾಬಿನೆಟ್‌ನಲ್ಲಿ ಮಂಡಿಸುತ್ತೇನೆ ಅಲ್ಲದೆ ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ಮಾಡಿ ಖಾಯಂ ಮಾಡುವ ಬಗ್ಗೆ We will take a decision

ಉಪಾಧ್ಯಕ್ಷರು ರಘುಪತಿ ಭಟ್

152 (1377) ಶ್ರೀ ರಘುಪತಿ ಭಟ್ ಕೆ (ಉಡುಪಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ವಾಸ್ತವ್ಯವಿದ್ದು, ಹಕ್ಕುಪತ್ರ ಪಡೆಯಲು ಅರ್ಹರಿರುವ ಫಲಾನುಭವಿಗಳ ಸಂಖ್ಯೆ ಎಷ್ಟು (ಗ್ರಾಮ ಪಂಚಾಯತಿವಾರು ಮಾಹಿತಿ ನೀಡುವುದು),

ಆ) ಆ ಪೈಕಿ ಕಂದಾಯ ಅಧಿನಿಯಮ 94ಸಿ ರಡಿ ಅರ್ಜಿ ನೀಡಿದವರ ಸಂಖ್ಯೆ ಎಷ್ಟು,

ಇ) ಈ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ವಿಳಂಬವಾಗಲು ಕಾರಣವೇನು, ಇವರೆಲ್ಲರಿಗೆ ಗ್ರಾಮ ಪಂಚಾಯತದ ವಸತಿ ಸಮಿತಿ ಮೂಲಕ ಹಕ್ಕು ಪತ್ರ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು,

ಈ) ಕಂದಾಯ ಅಧಿನಿಯಮ 94ಸಿ ಯಡಿಯಲ್ಲಿ ಇವರಿಗೆ ಹಕ್ಕುಪತ್ರ ನೀಡಲು ಅವಧಿ ವಿಸ್ತರಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?